ಇಂದು ದಿನಾಂಕ 03-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್.ಎಂ.ಬಿ. ವಕೀಲರಿಂದಃ**

ನಾನು ಲಾರಿಯ 3 ನೇ ಮಾಲಿಕ. ನಿ.ಪಿ. 14 ರಲ್ಲಿ ನಾನು ಎಷ್ಟನೇ ತಾರೀಖಿನಿಂದಸದರಿ ವಾಹನದ ಮಾಲಿಕನು ಎಂಬ ಬಗ್ಗೆ ಬರೆದಿಲ್ಲ. ಅಪಘಾತ ಸಮಯದಲ್ಲಿ ನಾನು ಸದರಿ ಲಾರಿಯ ಮಾಲಿಕನಾಗಿರಲಿಲ್ಲ , ಒಂದುವೇಳೆ ಮಾಲಿಕನಾಗಿದ್ದರೆ, ನಿ.ಪಿ.14 ರಲ್ಲಿ ಬರೆಯುತ್ತಿದ್ದರು ಎಂದರೆ ಸರಿಯಲ್ಲ . ಅಪಘಾತದ ನಂತರ ಆರ್.ಸಿ. ನನ್ನ ಹೆಸರಿಗೆ ಟ್ರಾನ್ಸಫರ್ ಆಗಿದೆ, ಕಾರಣ ನ್ಯಾಯಾಲಯದ ದಿಕ್ಕು ತಪ್ಪಿಸಲು ನಿ.ಪಿ.14 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘತ ಸಮಯದಲ್ಲಿ ನಾನು ಸದರಿ ಲಾರಿಯ ಮಾಲಿಕನು ಅಲ್ಲದೇ ಇರುವುದರಿಂದ ನಾನು ಪರಿಹಾರ ಪಡೆಯಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನಿ.ಪಿ.15 ರ ಪ್ರಕಾರ ವಾಹನ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ.

**3 ನೇ ಮತ್ತು 4 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ